## ನಿಮ್ಮೊಡನೆ

# ಮಹಿಳಾ ಸ್ವಾವಲಂಬನೆಯ ಜರೂರು

ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟಿರುವ ಮಹಿಳೆಯರು ದುಡಿಯುವ ವಿಷಯದಲ್ಲಿ ಎರಡನೆಯವರಾಗಿ ಉಳಿಯುವುದು ಅಭಿವೃದ್ಧಿಯ ಪರಿಕಲ್ಪನೆಯನ್ನೇ ಅಣಕಿಸುವಂತಿದೆ. ದೇಶದಲ್ಲಿನ ಕಿರು ಉದ್ಯಮಗಳ ಕ್ಷೇತ್ರವನ್ನು ಉದಾಹರಣೆ ಗಮನಿಸಿದರೆ, ಅಲ್ಲಿ ಮಹಿಳೆಯರು ಸ್ಥಾಪಿಸಿರುವ ಉದ್ದಿಮೆಗಳು ಶೇ.12ಕ್ಕಿಂತಲೂ ಹೆಚ್ಚಾಗಿಲ್ಲ. ಈ ವೈರುಧ್ಯ ಕರ್ನಾಟಕ ಅಥವಾ ಭಾರತಕ್ಕಷ್ಟೇ ಸೀಮಿತವಾದುದಲ್ಲ.



2011ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿನ ದುಡಿಯುವ ಮಹಿಳೆಯರ ಪ್ರಮಾಣ ಶೇ.31.9ರಷ್ಟು. ಈ ಪ್ರಮಾಣ 2001ರ ಜನಗಣತಿಯ ದಾಖಲಾತಿಗಳ ಪ್ರಕಾರ ಶೇ.32. ಹತ್ತು ವರ್ಷಗಳ ಅಂತರದಲ್ಲಿ ದುಡಿಯುವ ಮಹಿಳೆಯರ ಸಂಖ್ಯೆಯಲ್ಲಿ ಗಣನೀಯ ವ್ಯತ್ಯಾಸವೇನೂ ಆಗದಿರುವುದು ಆತಂಕ ಉಂಟುಮಾಡುವ ವಿದ್ಯಮಾನ. ಈ ಅಂಕಿಅಂಶಗಳು ಪ್ರಕಟವಾಗಿರುವ ಸಂದರ್ಭದಲ್ಲೇ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆ ತೀರಾ ಕಡಿಮೆ ಇರುವ ಬಗ್ಗೆ ಅಮೆರಿಕದ ಉಪ ಸಹಾಯಕ ಕಾರ್ಯದರ್ಶಿ ಅಲಿಸಾ ಆಯರ್ಸ್ ತಮ್ಮ ಬೆಂಗಳೂರು ಭೇಟಿಯ ಸಮಯದಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಅಲಿಸಾ ಅವರ ಮಾತನ್ನೇ ಮುಂದುವರಿಸುವುದಾದರೆ, ವಿಜ್ಞಾನ, ತಂತ್ರಜ್ಞಾನ ಮತ್ತು ಗಣಿತ ವಿಭಾಗಗಳಲ್ಲಿ ಪದವಿ ಪಡೆಯುವ ಹುಡುಗಿಯರ ಸಂಖ್ಯೆ ಕಡಿಮೆಯಾಗುತ್ತಿದೆ. ಇದರಿಂದಾಗಿಯೇ ಮಾಹಿತಿ ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ ಮಹಿಳೆಯರ ಪ್ರಾತಿನಿಧ್ಯದ ಕೊರತೆ ಕಾಣಿಸುತ್ತಿದೆ. ಇದು ಕೇವಲ ಅಂಕಿ ಅಂಶಗಳ ಮಾತಾಗಿರದೆ, ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟಿರುವ ಮಹಿಳೆಯರು ದುಡಿಯುವ ವಿಷಯದಲ್ಲಿ ಎರಡನೆಯವರಾಗಿ ಉಳಿಯುವುದು ಅಭಿವೃದ್ಧಿಯ ಪರಿಕಲ್ಪನೆಯನ್ನೇ ಅಣಕಿಸುವಂತಿದೆ. ದೇಶದಲ್ಲಿನ ಕಿರು ಉದ್ಯಮಗಳ ಕ್ಷೇತ್ರವನ್ನು ಉದಾಹರಣೆಗೆ ಗಮನಿಸಿದರೆ, ಅಲ್ಲಿ ಮಹಿಳೆಯರು ಸ್ಥಾಪಿಸಿರುವ ಉದ್ದಿಮೆಗಳು ಶೇ.12ಕ್ಕಿಂತಲೂ ಹೆಚ್ಚಾಗಿಲ್ಲ. ಈ ವೈರುಧ್ಯ ಕರ್ನಾಟಕ ಅಥವಾ ಭಾರತಕ್ಕಷ್ಟೇ ಸೀಮಿತವಾದುದಲ್ಲ. ಯುರೋಪಿನ ಮುಂದುವರಿದ ದೇಶಗಳಲ್ಲೂ ಉನ್ನತ ಕ್ಷೇತ್ರಗಳಲ್ಲಿ ಹಾಗೂ ಸ್ವಂತ ಉದ್ಯಮಗಳ ಸ್ಥಾಪನೆಯಲ್ಲಿ ಮಹಿಳೆಯರು ಎಲ್ಲ ಕಾಲದಲ್ಲೂ ಅಲ್ಪಸಂಖ್ಯಾತರೇ. 1990ರಿಂದ ಇಲ್ಲಿಯವರೆಗೆ ಅಮೆರಿಕದಲ್ಲಿ ಸ್ವ ಉದ್ಯೋಗ ಹೊಂದಿರುವ ಮಹಿಳೆಯರ ಸಂಖ್ಯೆ ಶೇ. 34ರ ಆಸುಪಾಸಿನಲ್ಲೇ ಇರುವುದನ್ನು ಗಮನಿಸಬಹುದು.

ಮಹಿಳಾ ಉದ್ಯಮಿಗಳ ಸಂಖ್ಯೆ ತೀರಾ ಕಡಿಮೆ ಇರುವುದಕ್ಕೆ ಕಾರಣವಾದರೂ ಏನು? ಅನನುಭವ, ಹಿಂಜರಿಕೆ, ಬಂಡವಾಳ ಹೊಂಚಿಕೊಳ್ಳುವ ತೊಡಕುಗಳು, ಸೂಕ್ತ ಶಿಕ್ಷಣ ಹೊಂದಿಲ್ಲದಿರುವುದು, ಸಾಂಪ್ರದಾಯಿಕ ಮನೋಭಾವ– ಹೀಗೆ, ಕಾರಣಗಳನ್ನು ಪಟ್ಟಿ ಮಾಡಲಾಗುತ್ತದೆ. ಅಮೆರಿಕವೂ ಸೇರಿದಂತೆ ಇಪ್ಪತ್ತು ದೇಶಗಳಲ್ಲಿ ನಡೆದ ಸಮೀಕ್ಷೆಯೊಂದನ್ನು ಆಧರಿಸಿದ ವರದಿ ಹೇಳುತ್ತದೆ– 'ಬಹುತೇಕ ಮಹಿಳೆಯರು ಬೇರೆಯವರ ಆಶ್ರಯದಲ್ಲಿ ಕೆಲಸ ಮಾಡಲು ಬಯಸುತ್ತಾರೆ'. ಈ ಸಮೀಕ್ಷೆಯ ಧೋರಣೆ ಅನೇಕ ಸಂದರ್ಭಗಳಲ್ಲಿ ನಮ್ಮ ಸಮಾಜದಲ್ಲೂ ಕಾಣಿಸುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳ ಪ್ರಾತಿನಿಧ್ಯ ಅಸಮರ್ಪಕ ಆಗಿರಲು ಅವರಲ್ಲಿನ ಇಚ್ಛಾಶಕ್ತಿಯೇ ಕಾರಣ ಎನ್ನುವುದು ಮೇಲ್ನೋಟಕ್ಕೆ ಕಾಣಿಸುವ ಸಂಗತಿ. ಆದರೆ, ಇದರ ಹಿಂದೆ 'ಪುರುಷ ಇಚ್ಛಾಶಕ್ತಿ'ಯೊಂದು ಇರುವುದನ್ನೂ ಗಮನಿಸಬೇಕು. ಬಹುತೇಕ ಪರೀಕ್ಷೆಗಳಲ್ಲಿ ಮೇಲುಗೈ ಸಾಧಿಸುವ ಬಾಲಕಿಯರು ಅಧಿಕಾರ, ಸ್ಥಾನಗಳನ್ನು ಸಂಪಾದಿಸುವಲ್ಲಿ ಮಾತ್ರ ಯಾಕೆ ಹಿಂದುಳಿಯುತ್ತಾರೆ ಎನ್ನುವುದನ್ನೂ ಚಿಂತಿಸಬೇಕು. ನಮ್ಮ ಕೌಟುಂಬಿಕ ವ್ಯವಸ್ಥೆಯಲ್ಲಿ ಹೆಣ್ಣುಮಕ್ಕಳ ಸ್ವಾವಲಂಬನೆಗೆ ಅವಕಾಶ ಕಲ್ಪಿಸುವ ಹಾಗೂ ಅವರ ಆರ್ಥಿಕ ಮೇಲ್ಮೆಯನ್ನು ಸಂತೋಷದಿಂದ ನೋಡುವ ಮನೋಭಾವ ತೀರಾ ಕಡಿಮೆ.

ಮಕ್ಕಳನ್ನು ಬೆಳೆಸುವ ನಮ್ಮ ಸಾಮಾಜಿಕ ವ್ಯವಸ್ಥೆ ಹೆಣ್ಣುಮಕ್ಕಳ ನಾಳೆಗಳಿಗೊಂದು ಭದ್ರ ಚೌಕಟ್ಟು ಹಾಕುತ್ತದೆ. ಮದುವೆಯಲ್ಲಿ, ಸುರಕ್ಷಿತ ನೌಕರಿಗಳಲ್ಲಿ ಮಗಳ ಭವಿಷ್ಯವನ್ನು ಕಾಣುವ ಪೋಷಕರು, ಅವಳಲ್ಲಿನ ಸಾಹಸ ಮನೋಭಾವ ಮತ್ತು ಕ್ರಿಯಾಶಕ್ತಿಯ ಅಭಿವ್ಯಕ್ತಿಗೆ ಗಾಳಿಬೆಳಕು ಒದಗಿಸುವ ಗೋಜಿಗೆ ಹೋಗುವುದಿಲ್ಲ. ವೈಯಕ್ತಿಕ ಆಸೆಗಳ ಬದಲಾಗಿ, ಕುಟುಂಬದ ಹಾಗೂ ಸಮಾಜದ ಹಂಬಲಗಳಿಗೆ ಹೆಗಲುಕೊಡುವ ಅನಿವಾರ್ಯತೆಯನ್ನು ಹೆಣ್ಣುಮಕ್ಕಳಿಗೆ ಸೃಷ್ಟಿಸುತ್ತೇವೆ. ಕುಟುಂಬದ ಉದ್ಯಮಗಳಲ್ಲಿ ತೊಡಗಿಕೊಳ್ಳಲು ಗಂಡುಮಕ್ಕಳನ್ನು ಉತ್ತೇಜಿಸಲಾಗುತ್ತದೆ. ಈ ಬೆಂಬಲ ಹುಡುಗಿಯರಿಗೆ ದೊರಕುವುದು ಅಪರೂಪ. ಸ್ವಂತ ಉದ್ಯಮ ಆರಂಭಿಸಲು ಪುರುಷರಿಗೆ ಬಂಡವಾಳ ಹೊಂಚಿಕೊಳ್ಳುವುದೂ ಸುಲಭ. ಉತ್ತೇಜನವಿಲ್ಲದೆ, ಬಂಡವಾಳ ಹೊಂದಿಸಿಕೊಳ್ಳುವುದೂ ಕಷ್ಟವಾಗಿರುವಾಗ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯಮಿಗಳಾಗಬೇಕು ಎಂದು ನಿರೀಕ್ಷಿಸುವುದು ಹೇಗೆ ಸಾಧ್ಯ?

ಸ್ವಂತ ಉದ್ಯೋಗ ಹಾಗೂ ಉದ್ಯಮಗಳ ಹೊರತಾಗಿ ಶ್ರಮದಾಯಕ ಕೆಲಸಗಳ ಸಂದರ್ಭದಲ್ಲೂ ಸಮಾನತೆಯಿಲ್ಲ. ಊದುಬತ್ತಿ, ಗಾರ್ಮೆಂಟ್ಸ್‌ನಂತಹ ಕಷ್ಟಕರ ಕೆಲಸಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚು. ಕೃಷಿ, ಕಟ್ಟಡ ನಿರ್ಮಾಣದಲ್ಲೂ ಹೆಣ್ಣುಮಕ್ಕಳಿದ್ದಾರೆ. ಆದರೆ ಇಂಥ ಕೆಲಸಗಳಲ್ಲಿ ಪುರುಷನಿಗಿಂತ ಶೇ.40–50ರಷ್ಟು ಕಡಿಮೆ ವೇತನ ಮಹಿಳಾ ಕಾರ್ಮಿಕರಿಗೆ ದೊರೆಯುತ್ತದೆ. ದುಡಿಮೆ ಸಮಾನವಾಗಿದ್ದರೂ, ವೇತನ ಸಮಾನವಾಗದಿರುವ ವಿಪರ್ಯಾಸ ಇಲ್ಲಿಯದು.

ಉದ್ಯೋಗ– ಉದ್ಯಮಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸದ ಸಾಮಾಜಿಕ ಅಭಿವೃದ್ಧಿಯ ಪರಿಕಲ್ಪನೆ ಅಪೂರ್ಣವಾದುದು. ಈ ಕೊರತೆಯನ್ನು ಸರಿಪಡಿಸುವುದು ಸಾಮಾಜಿಕ ಜವಾಬ್ದಾರಿ.

■ ರಘುನಾಥ ಚ.ಹ.